## ನನ್ನ ಸ್ವಾತಂತ್ರ್ಯ



### ದೇಶದ ಹೆಮ್ಮೆ ಹೆಚ್ಚಿಸುವವರಿಗೆ ಸಿಗಲಿ ಆದ್ಯತೆ

ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ಕೀರ್ತಿ ಪತಾಕೆಯನ್ನು ಹಾರಿಸುವ ಭಾರತದ ಕ್ರೀಡಾಪಟುಗಳಿಗೆ ತಾವು ಬಯಸುವ ಸ್ಥಳದಲ್ಲಿ ಮುಕ್ತ ತರಬೇತಿಗೆ ಅವಕಾಶ ಕೊಡಬೇಕು. ಕ್ರೀಡಾಪಟುಗಳಿಗೆ ಸಿಗುವ ನಿಜವಾದ ಸ್ವಾತಂತ್ರ್ಯವೇ ಇದು.

ಕ್ರೀಡಾ ಸೌಲಭ್ಯ, ಕ್ರೀಡಾ ಪರಿಕರಗಳನ್ನು ಒದಗಿಸುವ ನಿಟ್ಟಿನಲ್ಲಿ ಬೇರೆ ದೇಶಗಳ ನಡೆ ಭಾರತಕ್ಕೆ ಮಾದರಿಯಾಗಬೇಕಿದೆ. ಸ್ವಾತಂತ್ರ್ಯ ಎಂಬುದು ಅಭಿವೃದ್ಧಿಯ ಚೆಂಬೆಳಕು. ಇದು ಎಲ್ಲಾ ಕ್ಷೇತ್ರಗಳಲ್ಲಿ ಪ್ರಖರವಾಗಿ ವಿಜೃಂಭಿಸಲು ದೇಶ ಸಾಧನೆಯ ಹಾದಿಯಲ್ಲಿ ಸಾಗಬೇಕು. ದೇಶ ಸ್ವತಂತ್ರವಾಗಿ 75 ವರ್ಷಗಳೇ ಉರುಳಿವೆ. ಆದರೆ, ನಮ್ಮ ದೇಶದ ಕ್ರೀಡಾಪಟುಗಳಿಗೆ ವಿಶ್ವ ಶ್ರೇಷ್ಠ ಕ್ರೀಡಾಕೂಟ ಒಲಿಂಪಿಕ್ಸ್‌ನಲ್ಲಿ ಇದರ ಅರ್ಧದಷ್ಟು ಕೂಡ ಪದಕಗಳನ್ನು ಗೆಲ್ಲಲು ಆಗಿಲ್ಲ. ಮುಂಬರುವ ದಿನಗಳಲ್ಲಿ ಇದರ ಬಗ್ಗೆ ಸರ್ಕಾರ ಯೋಚಿಸಬೇಕಿದೆ.

**ಉಷಾರಾಣಿ ಎನ್.** ಅಂತರರಾಷ್ಟ್ರೀಯ ಕಬಡ್ಡಿ ಆಟಗಾರ್ತಿ

ಮುಂದುವರಿಯುತ್ತಲೇ ಇದೆ. ಜಾತಿ, ಧರ್ಮ ಪ್ರತ್ಯೇಕತೆಗಳ ವಿಷಬೀಜಗಳನ್ನು ಬಿತ್ತಿ ಬೆಳೆಯುವ ಗುಂಪುಗಳು ತಮ್ಮ ಸೈತಾನ ಕಾರ್ಖಾನೆಗಳನ್ನು ಎಡೆಬಿಡದೆ ನಡೆಸುತ್ತಲೇ ಇವೆ. ಚರಿತ್ರೆಯ ಪುಟಗಳಲ್ಲಿ ಜನ ಯಾವುದನ್ನು ಮರೆಯಬೇಕು, ಮರೆಯಬಾರದು ಎಂಬುದನ್ನು ತಂತಮ್ಮ ಹಿತಾಸಕ್ತಿಗಳಿಗೆ ಅನುಗುಣವಾಗಿ ನಿರ್ಧರಿಸಿ ಸಂಚು ಮಾಡುವ ಸಂಪ್ರದಾಯವಾದಿ ಪಕ್ಷಗಳು ಹಾಗೂ ಮಾರುಕಟ್ಟೆ ಗುಂಪುಗಳು ಈ ವಿಷಕಾರ್ಖಾನೆಗಳನ್ನು ಸದಾ ಚಾಲ್ತಿಯಲ್ಲಿಟ್ಟಿರುತ್ತವೆ.

ಈ ಕಾಯಿಲೆಗಳಿಗೆ ಇರುವ ಒಂದು ಮದ್ದೆಂದರೆ, ಸ್ವಾತಂತ್ರ್ಯ ಚಳವಳಿಯ ನಿಜವಾದ ಸ್ಪಿರಿಟ್ಟನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುವುದು. ಸಂಕುಚಿತ ಗುಂಪುಗಳ ವಿಭಜಕ ಭಾಷೆ, ಕರಾಮತ್ತುಗಳ ಈ ಕಾಲದಲ್ಲಿ, ಸ್ವಾತಂತ್ರ್ಯ ಚಳವಳಿಯ ಘಟ್ಟಗಳಲ್ಲಿ ವಿವಿಧ ಬಗೆಯ ಚಿಂತನೆ ಹಾಗೂ ಮಾರ್ಗಗಳ ಗುಂಪುಗಳು ದೇಶದ ಹಿತ ಮಾತ್ರವನ್ನೇ ಗುರಿಯಾಗಿಸಿಕೊಂಡು ಹೊರಟ ಬಗೆಯನ್ನು ಇವತ್ತಿನ ತಲೆಮಾರುಗಳು ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕು. ಇವತ್ತಿಗೂ ಆರ್ಥಿಕ ಸ್ವಾತಂತ್ರ್ಯ ಕೈಗೆಟುಕದೇ ಉಳಿದಿರುವ ವರ್ಗಗಳ ಭವಿಷ್ಯದ ಬಗ್ಗೆ ಹೊಸ ತಲೆಮಾರು ಯೋಚಿಸುವಂತಾಗಬೇಕು. ಗಾಂಧೀಜಿ 'ಸ್ವರಾಜ್' ಎಂದರೆ ಕೇವಲ ದೇಶ ಸ್ವಾತಂತ್ರ್ಯ ಗಳಿಸುವುದು ಎಂದಲ್ಲ; ಜೊತೆಗೆ ತನ್ನನ್ನು ತಾನು ಆಳಿಕೊಳ್ಳುವುದು, ನಿಯಂತ್ರಿಸಿಕೊಳ್ಳುವುದು ಕೂಡ ಎಂದು ಭಾರತೀಯನಿಗೆ ವಿವರಿಸುತ್ತಾ ಹೇಳಿದ ಮಾತುಗಳು ನಮ್ಮ ನೆನಪಿನಲ್ಲಿರಲಿ: 'ನಿಜಕ್ಕೂ ಇವತ್ತು ನೀನು ಇಡುವ ಹೆಜ್ಜೆಯಿಂದ ಕಟ್ಟ ಕಡೆಯ ಮನುಷ್ಯನಿಗೆ ಏನಾದರೂ ಉಪಯೋಗವಿದೆಯೇ? ನೀನು ಇಡಬೇಕೆಂದಿರುವ ಹೆಜ್ಜೆ ಹಸಿದವರಿಗೆ, ಚೈತನ್ಯ ಬತ್ತಿದ ಲಕ್ಷಾಂತರ ಜನರಿಗೆ ಸ್ವರಾಜ್ಯ ತಂದು ಕೊಡುವುದೇ?' ಇಂಥ ಸರಳ, ಗಂಭೀರ ಪ್ರಶ್ನೆಗಳ ದಿಕ್ಕಿನ ಕಡೆಗೆ ನಮ್ಮೆಲ್ಲ ನಡೆ, ನುಡಿಗಳನ್ನೂ ಕೊಂಚ ತಿರುಗಿಸಿಕೊಂಡರೂ ಸಾಕು, ಈ ದೇಶದ ಎಷ್ಟೋ ಕಾಯಿಲೆಗಳು ಮಾಯವಾಗಬಲ್ಲವು.

1949ರ ನವೆಂಬರ್ 26ರಂದು ದೇಶಕ್ಕೆ ಹೊಸ ಸಂವಿಧಾನವನ್ನು ಒಪ್ಪಿಸುತ್ತಾ ಬಾಬಾಸಾಹೇಬ ಅಂಬೇಡ್ಕರ್ ಹೇಳಿದ ಮಾತುಗಳನ್ನು ಮತ್ತೆ ನೆನಪಿಸಿಕೊಳ್ಳೋಣ: 'ಸ್ವಾತಂತ್ರ್ಯ ಬಂದ ನಂತರ ಇನ್ನು ಎಲ್ಲ ತಪ್ಪುಗಳಿಗೂ ಬ್ರಿಟಿಷರನ್ನು ಹಳಿಯುತ್ತಾ ಕೂರುವ ಕಾಲ ಮುಗಿಯಿತು. ಇನ್ನು ಮುಂದೆ ಆಗುವ ತಪ್ಪುಗಳಿಗೆಲ್ಲ ನಮ್ಮನ್ನೇ ನಾವು ಹಳಿದುಕೊಳ್ಳಬೇಕಾಗುತ್ತದೆ.' ಅಂಬೇಡ್ಕರ್ ಅವರ ಮಾತಿನ ಅರ್ಥವನ್ನು ಭಾರತದ ಪ್ರಥಮ ಪ್ರಧಾನಿ ನೆಹರೂ ಸರಿಯಾಗಿ ಗ್ರಹಿಸಿದ್ದರು. ನೆಹರೂಯುಗದ ಧೀಮಂತ ರಾಜಕಾರಣಿಗಳು ಅಂದು ದೇಶ ಹಿಡಿಯುತ್ತಿದ್ದ ಅಡ್ಡ ಹಾದಿಗಳ ಬಗೆಗೂ ಸ್ವವಿಮರ್ಶೆ ಮಾಡಿಕೊಳ್ಳಬಲ್ಲವರಾಗಿದ್ದರು. ಆದರೆ ಕಳೆದ ಕೆಲವು ದಶಕಗಳಲ್ಲಿ ನಿರ್ವಸಾಹತೀಕರಣ ಸಿದ್ಧಾಂತಿಗಳು ಬ್ರಿಟಿಷ್ ವಸಾಹತೀಕರಣವನ್ನು ಟೀಕಿಸುವುದನ್ನೇ ಹೆಚ್ಚು ಮಾಡುತ್ತಾ ದೇಶದ ಆಂತರಿಕ ವಿಮರ್ಶೆಯನ್ನೇ ಕಡಿಮೆ ಮಾಡಿಬಿಟ್ಟರು. ಕೆಲವರಂತೂ ಜಾತಿಪದ್ಧತಿಯ ಹೆಚ್ಚಳಕ್ಕೂ ಬ್ರಿಟಿಷ್ ಆಡಳಿತವೇ ಕಾರಣ ಎಂದು ಅಸಂಬದ್ಧವಾಗಿ ವಾದಿಸತೊಡಗಿದರು. ಇಂಥ ಬೌದ್ಧಿಕ ಸರ್ಕಸ್ಸುಗಳಿಂದ ಭಾರತದ ಸಮಸ್ಯೆಗಳು ಒಂದಿಷ್ಟೂ ಕಡಿಮೆಯಾಗಲಿಲ್ಲ. ಸ್ವಾತಂತ್ರ್ಯಾನಂತರ ಅಷ್ಟಿಷ್ಟಾದರೂ ಜಾತಿ ಮೀರಿ ದೇಶದ ಬಗ್ಗೆ ಯೋಚಿಸತೊಡಗಿದ್ದ ಜನ ಮತ್ತೆ ಜಾತಿಯ ಚಿಪ್ಪುಗಳಲ್ಲಿ ಸೇರಿಕೊಂಡು ಕುಬ್ಜರಾಗತೊಡಗಿದರು. ಕ್ಷುದ್ರ ರಾಜಕೀಯ ಪಕ್ಷಗಳು, ಧರ್ಮದ ನಿಜಾರ್ಥ ಮರೆತ ಧಾರ್ಮಿಕ ಗುಂಪುಗಳು ಈ ಸಂಕುಚಿತತೆಗೆ ನೀರೆರೆಯುತ್ತಾ ಬಂದವು. ಇತ್ತ ಬ್ರಿಟಿಷ್ ಆಡಳಿತದ ತಪ್ಪುಗಳನ್ನೇ ಮರೆತು ಅವರಿಗಿಂತ ಹಿಂದಿನ ಮುಸ್ಲಿಂ ಆಡಳಿತಗಳ ದೋಷಗಳನ್ನೇ ಎಲ್ಲದಕ್ಕೂ ದೂರುತ್ತಾ, ಇಂದಿನ ಮುಸ್ಲಿಮರನ್ನು ಹೀಗಳೆಯುವ ಕೆಲಸವನ್ನು ಕೋಮುವಾದಿಗಳೂ, ಕೋಮುವಾದಿ ಬರಹಗಾರರೂ ಇವತ್ತಿಗೂ ಮುಂದುವರಿಸಿದ್ದಾರೆ. ಚರಿತ್ರೆಯ ಓಟದಲ್ಲಿ ಅಪ್ರಸ್ತುತವಾಗಿ ಕಾಣುವ ಇಂಥ ಸೀಮಿತ ಬುದ್ಧಿಯ ಪ್ರತಿಕ್ರಿಯೆಗಳು ಆಳುವ ವರ್ಗಗಳು ಜನರ ದೃಷ್ಟಿಯನ್ನು ಬೇರೆಡೆಗೆ ತಿರುಗಿಸುವ ಸಂಚುಗಳೂ ಆಗಿವೆ. ಅದೇ ರೀತಿ ಪ್ರತಿ ವಿಫಲ ಸರ್ಕಾರವೂ ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಹಿಂದಿನ ಸರ್ಕಾರವನ್ನು ಹೊಣೆಯಾಗಿಸುವುದು ಕೂಡ ಪ್ರಚ್ಛನ್ನ ಬೇಜವಾಬ್ದಾರಿತನವೇ ಆಗಿದೆ.

ಸ್ವಾತಂತ್ರ್ಯೋತ್ತರ ಭಾರತದ ಮುನ್ನಡೆ ಎಲ್ಲ ಭಾಗೀದಾರರಿಂದಲೂ ಹೇಗೆ ಆಗಿದೆಯೋ, ಹಾಗೆಯೇ ದೇಶದ ಹಿನ್ನಡೆಗೆ ಕೂಡ ಈ ಎಲ್ಲ ಭಾಗೀದಾರರೂ ಕಾರಣರಾಗಿದ್ದಾರೆ. ಇಲ್ಲಿ ಬಹುತೇಕ ಎಲ್ಲ ಮುಖ್ಯ ರಾಜಕೀಯ ಪಕ್ಷಗಳೂ ರಾಜ್ಯ, ಕೇಂದ್ರಗಳಲ್ಲಿ ಒಂದಲ್ಲ ಒಂದು ಹಂತದಲ್ಲಿ ಆಳ್ವಿಕೆ ನಡೆಸಿವೆ. ಇಲ್ಲಿ ಯಾರಿಗೂ ಯಾರನ್ನೂ ಹೀಗಳೆಯುವ ಹಕ್ಕು ಇಲ್ಲ. ಆದ್ದರಿಂದ ಸಂಕುಚಿತ ಬುದ್ಧಿಯ ರಾಜಕೀಯ ಪಕ್ಷಗಳು, ಹಿತಾಸಕ್ತ ಗುಂಪುಗಳು ಕಾಲಕಾಲಕ್ಕೆ ಕೊಡುವ ತಮ್ಮ ಮೂಗಿನ ನೇರದ ಹುಸಿವ್ಯಾಖ್ಯಾನಗಳನ್ನು ಹೊಸ ತಲೆಮಾರು ತಿರಸ್ಕರಿಸಿ, ಇತಿಹಾಸದ ಪುಟಗಳ ಪಾಠಗಳನ್ನು ಸ್ವತಂತ್ರವಾಗಿ, ವಸ್ತುನಿಷ್ಠವಾಗಿ ಅರಿಯಬೇಕು. ಶಾಲಾ ಪಠ್ಯಗಳಲ್ಲಿ ಸುಳ್ಳು ತುಂಬಿಸುತ್ತಿರುವ ಹೀನ ಮನಸ್ಸುಗಳು ಕೇವಲ 75 ವರ್ಷಗಳ ಕೆಳಗೆ ನಡೆದ ಜಗತ್ತಿನ ದೊಡ್ಡ ಸ್ವಾತಂತ್ರ್ಯ ಚಳವಳಿಯ ವಿವರಗಳನ್ನೇ ತಿರುಚಿ ಇವತ್ತು ಮಕ್ಕಳಿಗೆ ಹೇಳಲು ಹೊರಟಿರುವ ಸಂಚುಗಳ ಬಗೆಗೆ ಸ್ವಾತಂತ್ರ್ಯ ಪ್ರೇಮಿ ಪೋಷಕರಿಗೂ ಎಚ್ಚರವಿರಬೇಕು.

ಸ್ವತಂತ್ರ ಭಾರತಕ್ಕೆ ಹೊಸ ಸಂವಿಧಾನವನ್ನು ಒಪ್ಪಿಸಿದ ದಿನ ಅಂಬೇಡ್ಕರ್ ನೀಡಿದ ಮತ್ತೊಂದು ಎಚ್ಚರಿಕೆಯನ್ನು ಇಂದಿನ ತಲೆಮಾರು

